NO. BDA/EM/EO1/TA2/CC/T-130/2015-16 Date: 01-07-2015

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು

ಅನುಸೂಚಿ-7

(ಉಪವಿಧಿ ಸಂಖ್ಯೆ: 5.3)

## ಪ್ರಾರಂಭಿಕ ಪ್ರಮಾಣ ಪತ್ರ

ಇವರಿಗೆ,

**M/s Universal Builders,**
**#487, 38th Cross, Kanakapura Main Road,**
**Opp. JSS College, 8th Block,**
**Jayanagara, Bangalore – 560082.**

ಮಾನ್ಯರೆ,

**ವಿಷಯ:**-ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದ ಸರ್ವೆ ನಂ. 51/1P, (ಹೊಸ ಸಂಖ್ಯೆ. 51/16(P)), 51/17, 51/18), 127/1(P), 127/2(P), 128/1, 128/2, 128/3, 128/4, 128/5(P), 128/6, 129/1(A), 129/B, 129/2, 129/3, 130/1, 130/2, 130/3, 130/4, 130/5A, 130/5B, 130/6, 130/7, 130/8 ಮತ್ತು 143/P ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಹುವಸತಿ ಕಟ್ಟಡದ ಪೈಕಿ ಬ್ಲಾಕ್ 01(01A), 3, 4, 5, 6, 7, 8, 18 (Club house), 19 & 20 ಒಟ್ಟು 09 ವಸತಿ ಘಟಕಗಳ ಬ್ಲಾಕ್‌ಗಳಿಗೆ ಮತ್ತು 01 ಕ್ಲಬ್ ಹೌಸ್ ಬ್ಲಾಕ್ ಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಕುರಿತು.

**ಉಲ್ಲೇಖ:**- 1. ನಿಮ್ಮ ಅರ್ಜಿ ದಿನಾಂಕ: 23.02.2015.
2. ಮಾನ್ಯ ಆಯುಕ್ತರ ಆದೇಶ ಸಂಖ್ಯೆ: 2150, ದಿನಾಂಕ: 17-06-2015.

******

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದ ಸರ್ವೆ ನಂ. 51/1P, (ಹೊಸ ಸಂಖ್ಯೆ. 51/16(P)), 51/17, 51/18), 127/1(P), 127/2(P), 128/1, 128/2, 128/3, 128/4, 128/5(P), 128/6, 129/1(A), 129/B, 129/2, 129/3, 130/1, 130/2, 130/3, 130/4, 130/5A, 130/5B, 130/6, 130/7, 130/8 ಮತ್ತು 143/P ರಲ್ಲಿ ನಿರ್ಮಿಸುತ್ತಿರುವ **BF+GF+04UF** ಅಂತಸ್ತುಗಳನ್ನು ಹೊಂದಿರುವ **Block 1 ರಿಂದ Block 20 ರ ಪೈಕಿ Block- 1, 2, 3, 4, 5, 6, 7, 8, 9, 10, 18 (ಕ್ಲಬ್ ಹೌಸ್), 19 & 20 (ಒಟ್ಟು 13 ಬ್ಲಾಕ್‌ಗಳು)** ಗಳುಳ್ಳ **580 ವಸತಿ ಘಟಕಗಳನ್ನೊಳಗೊಂಡ,** ಬಹುವಸತಿ ಕಟ್ಟಡದ ಮಾರ್ಪಾಡಿತ ನಕ್ಷೆಗೆ ಸಂಖ್ಯೆ **ಬೆಂಅಪ್ರಾ/ನಮ/ಅಸ/ಅಅ-1/ತಾಸ-2/ದ/63/2013-14, ದಿನಾಂಕ: 29-03-2014** ರಲ್ಲಿ ನಕ್ಷೆ ಮಂಜೂರಾತಿ ನೀಡಿದ್ದು, ಉಲ್ಲೇಖ ಪತ್ರದಲ್ಲಿ ಅರ್ಜಿದಾರರು **Blocks- 01(01A), 3, 4, 5, 6, 7, 8, 18 (Club house), 19 & 20 ಒಟ್ಟು 09 ವಸತಿ ಘಟಕಗಳ ಬ್ಲಾಕ್‌ಗಳಿಗೆ ಮತ್ತು 01 ಕ್ಲಬ್ ಹೌಸ್ ಬ್ಲಾಕ್** ಗೆ ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿದ್ದು, ಯೋಜನೆಯ ಸ್ಥಳವನ್ನು ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರು ದಿನಾಂಕ: 22-04-2015 ರಂದು ಪರಿವೀಕ್ಷಣೆ ನಡೆಸಿ ಅಡಿಪಾಯ ಗುರುತಿಸಿ ನೀಡಿದ ವರದಿಯಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರು ಆದೇಶ ಸಂಖ್ಯೆ: **2150**, ದಿನಾಂಕ: **17-06-2015** ರಂದು ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಅನುಮೋದನೆ ನೀಡಿರುತ್ತಾರೆ. ನಿರ್ಮಾಣದಾರರು ಬ್ಲಾಕ್- 6, 7 & 8 ಅನ್ನು ನೆಲ+03ಮೇಲಂತಸ್ತಿನವರೆಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯದೇ ನಿರ್ಮಿಸಿರುವುದಕ್ಕೆ ದಂಡ ಶುಲ್ಕ ಮೊತ್ತ ರೂ. 07,93,349/- (ಏಳು ಲಕ್ಷ ತೊಂಭತ್ತಮೂರು ಸಾವಿರದ ಮೂರುನೂರ ನಲವತ್ತೊಂಭತ್ತು ಮಾತ್ರ) ಗಳನ್ನು ಕೆನರಾ ಬ್ಯಾಂಕ ಚಲನ್ ಸಂಖ್ಯೆ: 3357, ದಿ: 01.07.2015 ರಂದು ಪ್ರಾಧಿಕಾರಕ್ಕೆ ಭರಿಸಿರುತ್ತಾರೆ. ಅದರಂತೆ ಈ ಕೆಳಗಿನ ಷರತ್ತುಗಳಿಗೊಳಪಟ್ಟು, **BF+GF+04UF** ಅಂತಸ್ತುಗಳನ್ನು ಹೊಂದಿರುವ, **Block- 01 (1A) (20 Units), Block -3 (20 units), block-4(40 units), block-5 (40 units) block-6 (60 units), block-7 (60 units), block-8 (60 units), block-18 (club house), block-19 (20 units) and block-20 (40 units) ಒಟ್ಟು 09 ವಸತಿ ಘಟಕಗಳ ಬ್ಲಾಕ್** ಗಳಲ್ಲಿ **360 ವಸತಿ ಘಟಕಗಳು** ಹಾಗೂ **01 ಕ್ಲಬ್‌ಹೌಸ್ ಬ್ಲಾಕ್** ಒಳಗೊಂಡ ಬಹುವಸತಿ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

# ಪಾಲಿಸಬೇಕಾದ ಷರತ್ತುಗಳು

1. ಅರ್ಜಿದಾರರು KSPCB & BWSSB ಇಲಾಖೆಯಿಂದ ಪರಿಷ್ಕರಿಸಿದ ನಿರಾಕ್ಷೇಪಣಾ ಪತ್ರ (20 ಬ್ಲಾಕ್‌ಗಳಿಗೆ) ಪಡೆದು ಪ್ರಾಧಿಕಾರಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಸ್ವಾಧೀನಾನುಭವ ಪತ್ರ ನೀಡಲು ಪರಿಗಣಿಸುವುದಿಲ್ಲ.
2. ಪ್ರಾಧಿಕಾರದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
3. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
4. ಪ್ರಾಧಿಕಾರದಿಂದ ಮಂಜೂರಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಿಸತಕ್ಕದ್ದು, ಮಂಜೂರಾದ ನಕ್ಷೆಯಲ್ಲಿ ವಿಧಿಸಿದ ಎಲ್ಲಾ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
5. ಕಾಮಗಾರಿ ಪ್ರಾರಂಭಿಸಿರುವುದರಿಂದ ತಕ್ಷಣವೇ ಸ್ಥಳೀಯ ಸಂಸ್ಥೆಯಿಂದ ಲೈಸೆನ್ಸ್ ಹಾಗೂ ಖಾತಾ ಪತ್ರವನ್ನು ಪಡೆಯುವುದು ನಂತರವೇ ಕಾಮಗಾರಿಯನ್ನು ಮುಂದುವರೆಸುವುದು.
6. ಕಾಮಗಾರಿಯ ಅಡಿಪಾಯ ಅಥವಾ ಅಡಿಗಲ್ಲು, ಅಂಕಣಗಳನ್ನು ಮಾಡಿಸುವ ಕಾರ್ಯ ಮುಕ್ತಾಯದ ಹಂತವನ್ನು ತಲುಪಿದಾಗ, ಕಾಮಗಾರಿಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆದಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡುವುದು.
7. ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.
8. ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.
9. ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ Released Materials ಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು. ತಪ್ಪಿದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.
10. ಅಭಿವೃದ್ಧಿದಾರರು ಯೋಜನೆ / ಕಟ್ಟಡದ ನಿರ್ಮಾಣಕ್ಕಾಗಿ ಅಗತ್ಯ ವಿನ್ಯಾಸಗಳನ್ನು ತಯಾರಿಸಿಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರದಿಂದ ನೊಂದಾಯಿತ Structural Engineer ರವರನ್ನು ನೇಮಿಸಿಕೊಂಡು ಕಟ್ಟಡ ನಿರ್ಮಾಣವನ್ನು ಪ್ರಸ್ತುತ ಚಾಲ್ತಿ ನಿಯಮಗಳನ್ವಯ ಎಲ್ಲಾ ತಾಂತ್ರಿಕ ಅಂಶಗಳನ್ನು ಪಾಲಿಸಿಕೊಂಡು ತಯಾರಿಸಿರುವ ಬಗ್ಗೆ ಹಾಗೂ ನಿರ್ಮಿಸುವ ಬಗ್ಗೆ Structural Engineer ರವರಿಂದ ನಮೂನೆ – 2 ರಲ್ಲಿ ಪ್ರಮಾಣ ಪತ್ರವನ್ನು (Affidavit) ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
11. ಅಭಿವೃದ್ಧಿದಾರರು ಯೋಜನೆ / ಕಟ್ಟಡದ ನಿರ್ಮಾಣಕ್ಕಾಗಿ ಅಗತ್ಯ ಇಂಜಿನಿಯರಿಂಗ್ ವಿಧಾನಗಳನ್ನು ಅಳವಡಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಟ್ಟಡವನ್ನು ನಿರ್ಮಾಣ ಮಾಡಲು ಕರ್ನಾಟಕ ರಾಜ್ಯ ಸರ್ಕಾರದಿಂದ ನೊಂದಾಯಿತ ಯೋಜನಾ ನಿರ್ವಹಣಾ ಸಲಹೆಗಾರರು (Project Management Consultants) ರವರನ್ನು ನೇಮಿಸಿಕೊಂಡು ಕಟ್ಟಡ ನಿರ್ಮಾಣವನ್ನು ಪ್ರಸ್ತುತ ಚಾಲ್ತಿ ನಿಯಮಗಳನ್ವಯ ಎಲ್ಲಾ ತಾಂತ್ರಿಕ ಅಂಶಗಳನ್ನು ಪಾಲಿಸಿಕೊಂಡು ನಿರ್ವಹಿಸುವ ಬಗ್ಗೆ Project Management Consultants ರವರಿಂದ ನಮೂನೆ–2 ರಲ್ಲಿ ಪ್ರಮಾಣ ಪತ್ರವನ್ನು (Affidavit) ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
12. ಅರ್ಜಿದಾರರು ಕಟ್ಟಡದಲ್ಲಿನ ವಿದ್ಯುತ್ತೀಕರಣ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಏಜೆನ್ಸಿ / ಕನ್ಸಲ್ಟೆಂಟ್ ರವರಿಂದ ದೃಢೀಕರಣ ಪತ್ರವನ್ನು ಪಡೆದು ಸ್ವಾಧೀನಾನುಭವ ಪತ್ರ ಪಡೆಯುವ ಸಂದರ್ಭದಲ್ಲಿ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
13. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ/ಹೊರಡಿಸುವ ಯಾವುದೇ ಷರತ್ತುಗಳಿಗೆ/ಆದೇಶಗಳಿಗೆ ಅರ್ಜಿದಾರರು ಭದ್ದರಾಗಿರತಕ್ಕದ್ದು.

ಆಯುಕ್ತರ ಪರವಾಗಿ

ಮಂಜೂರಾತಿ ನೀಡಿದವರ ಸಹಿ ಮತ್ತು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಹುದ್ದೆ ನಾಮಮುದ್ರೆ

ಬೆಂಗಳೂರು

ಯಥಾ ಪ್ರತಿಯನ್ನು: ಕಾರ್ಯಪಾಲಕ ಅಭಿಯಂತರರು (ದ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.